**OCTOBER 29, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಪರಿಶಿಷ್ಟ ಸಮುದಾಯಗಳ ಒಳ ಮೀಸಲಾತಿ ಜಾರಿಗೆ, ಏಕ ಸದಸ್ಯ ಆಯೋಗ ರಚಿಸಲು, ಸಚಿವ ಸಂಪುಟ ಸಭೆ, ನಿರ್ಧಾರ.
- 69ನೇ ಕನ್ನಡ ರಾಜ್ಯೋತ್ಸವ; ನವೆಂಬರ್ 1 ರಂದು, ಅರ್ಥಪೂರ್ಣವಾಗಿ ಆಚರಿಸಲು, ಮುಖ್ಯಮಂತ್ರಿ ಕರೆ.
- ‘ಜಾಗತಿಕ ಆರೋಗ್ಯಕ್ಕಾಗಿ, ಆಯುರ್ವೇದದ ಅನ್ವೇಷಣೆಗಳು’ ಧ್ಯೇಯದೊಂದಿಗೆ, ಇಂದು 9ನೇ ಆಯುರ್ವೇದ ಮಾಸಿಕಕ್ಕೆ, ಚಾಲನೆ.
- ಸ್ತನ ಕ್ಯಾನ್ಸರ್ ಜಾಗ್ರತಿ ಮಾಸಿಕ; ಮಹಿಳೆಯರು ಮುಂಜಾಗ್ರತೆ ವಹಿಸಿ – ದಿನೇಶ ಗುಂಡೂರಾವ, ಮನವಿ.

<><><>

ಈಗ ವಾರ್ತೆಗಳ ವಿವರ

<><><>

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿಗೆ, ಏಕ ಸದಸ್ಯ ಆಯೋಗ ರಚಿಸಲು, ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ, ಸರ್ಕಾರ ಆಯೋಗ ರಚಿಸಲಿದ್ದು, ಆಯೋಗ ಮೂರು ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸುವಂತೆ, ಸೂಚಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

<><><>

ರಾಯಚೂರು ವಿಶ್ವವಿದ್ಯಾಲಯಕ್ಕೆ, ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಲು ತೀರ್ಮಾನಿಸಲಾಗಿದೆ.

<><><>

ಸರ್ಕಾರಿ ಶಾಲೆಗಳ 4 ಮತ್ತು 5ನೇ ತರಗತಿ 14 ಕೋಟಿ 20 ಲಕ್ಷ ರೂಪಾಯಿ ವೆಚ್ಚದ, "ಓದು ಕರ್ನಾಟಕ" ಚಟುವಟಿಕೆಯನ್ನು, ಅನುಮೋದಿಸಲಾಗಿದೆ.

<><><>

ಬಾಗಲಕೋಟೆ ಜಿಲ್ಲೆ, ಮುಧೋಳ ನಗರಕ್ಕೆ ಗುಳಬಾಳ ಹಳ್ಳಿ ಹತ್ತಿರ, ಕೃಷ್ಣಾ ನದಿ ಮೂಲದಿಂದ, ಸುಧಾರಿತ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು, 177 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ, ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

<><><>

ಶಿವಮೊಗ್ಗ ಜಿಲ್ಲೆ, ಸೋಗಾನೆಯ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿಗೆ, 127 ಕೋಟಿ 40 ಲಕ್ಷ ರೂಪಾಯಿ, ಹೆಚ್ಚುವರಿ ಅನುದಾನ ನೀಡಲು ತೀರ್ಮಾನಿಸಲಾಗಿದೆ.

<><><>

ಹಾಸನ ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಲು ಸಚಿವ ಸಂಪುಟ ನಿರ್ಧರಿಸಿದೆ.

<><><>

69ನೇ ಕನ್ನಡ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ, ಎಲ್ಲೆಡೆ ನವೆಂಬರ್ 1 ರಂದು, ಕನ್ನಡ ರಾಜ್ಯೋತ್ಸವವನ್ನು, ಅರ್ಥಪೂರ್ಣವಾಗಿ ಜನೋತ್ಸವದಂತೆ ಆಚರಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಆಶಿಸಿದ್ದಾರೆ. ಯುವ ಪೀಳಿಗೆಗೆ ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಕಲೆ, ಭಾಷೆ ಬಗ್ಗೆ, ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು, ಮುಖ್ಯಮಂತ್ರಿ ತಿಳಿಸಿದ್ದಾರೆ. ಏಕೀಕೃತ ರಾಜ್ಯವಾಗಿ 1973ರ ನವೆಂಬರ್ 1 ರಂದು, 'ಕರ್ನಾಟಕ' ಎಂದು, ಮರು ನಾಮಕರಣಗೊಂಡು, 51 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆ, ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸಲು ಮುಖ್ಯಮಂತ್ರಿ ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಕೋರಿದ್ದಾರೆ.

<><><>

ಬೆಂಗಳೂರು ಸೇರಿದಂತೆ, 40 ಸ್ಥಳಗಳಲ್ಲಿ ಇಂದು ಬೃಹತ್ ರೋಜ್‌ಗಾರ ಮೇಳ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, 51 ಸಾವಿರಕ್ಕೂ ಹೆಚ್ಚು ಜನರಿಗೆ, ನೇಮಕಾತಿ ಪತ್ರಗಳನ್ನು, ವಿಡಿಯೋ ಸಂವಾದದಲ್ಲಿ ವಿತರಿಸಲಿದ್ದಾರೆ.

<><><>

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ, ಭಾರತೀಯ ಅಂಚೆ ಇಲಾಖೆ, ಇಂದು ಬೆಳಗ್ಗೆ 09.30ಕ್ಕೆ, ಬೆಂಗಳೂರಿನ ಅರಮನೆ ರಸ್ತೆಯ, ಸೆಂಟ್ರಲ್ ಕಾಲೇಜು ಆವರಣದ, ಜ್ಞಾನಜ್ಯೋತಿ

ಸಭಾಂಗಣದಲ್ಲಿ, “ಉದ್ಯೋಗ ಮೇಳ” ಆಯೋಜಿಸಿದೆ. ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಖಾತೆ ಸಚಿವ, ಎಚ್.ಡಿ.ಕುಮಾರಸ್ವಾಮಿ ಅವರ ಉಪಸ್ಥಿತಿಯಲ್ಲಿ, ರಾಷ್ಟ್ರೀಯ ನೇಮಕಾತಿ ಅಭಿಯಾನ ಜರುಗಲಿದೆ ಎಂದು, ಬೆಂಗಳೂರು ವಲಯದ ಪೋಸ್ಟ್ ಮಾಸ್ಟರ್ ಜನರಲ್, ತಿಳಿಸಿದ್ದಾರೆ.

<><><>

ರಾಜ್ಯದ ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ, ನವೆಂಬರ್ 13 ರಂದು, ಮತದಾನ ನಡೆಯಲಿದೆ. ಬಳ್ಳಾರಿ ಜಿಲ್ಲೆ, ಸಂಡೂರು ವಿಧಾನಸಭೆ ಕ್ಷೇತ್ರದ ಏಳು ಜನ ಅಭ್ಯರ್ಥಿಗಳ ನಾಮಪತ್ರ ಸ್ವೀಕೃತಗೊಂಡಿವೆ ಎಂದು, ಸಹಾಯಕ ಚುನಾವಣಾಧಿಕಾರಿ ಎಚ್.ಡಿ.ರಾಜೇಶ್ ತಿಳಿಸಿದ್ದಾರೆ. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಸಲ್ಲಿಕೆಯಾಗಿದ್ದ 38 ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ. ಹಾವೇರಿ ಜಿಲ್ಲೆ ಶಿಗ್ಗಾಂವ ಕೇತ್ರದಲ್ಲಿ, 26 ಅಭ್ಯರ್ಥಿಗಳ ಪೈಕಿ 19 ಅಭ್ಯರ್ಥಿಗಳ ನಾಮಪತ್ರಗಳನ್ನು ಅಂಗೀಕರಿಸಿದ್ದು, 7 ನಾಮಪತ್ರಗಳು ತಿರಸ್ಕೃತಗೊಂಡಿವೆ. ನಾಡಿದ್ದು 31 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನ. ರಾಜಕೀಯ ಪಕ್ಷಗಳು, ಮೂರು ಕ್ಷೇತ್ರಗಳಲ್ಲಿ ಭರದ ಪ್ರಚಾರ ಕಾರ್ಯ ಕೈಗೊಂಡಿವೆ.

<><><>

ಮಾದರಿ ನೀತಿ ಸಂಹಿತೆ ಉಲ್ಲಂಘನೆ ಕುರಿತು ಸಾರ್ವಜನಿಕರು, ಭಾರತ ಚುನಾವಣಾ ಆಯೋಗದ, ಸಿ-ವಿಜಿಲ್ ಆಪ್‌ನಲ್ಲಿ, ನೇರವಾಗಿ ದೂರು ದಾಖಲಿಸಬಹುದು ಎಂದು, ಬಳ್ಳಾರಿ ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತಕುಮಾರ ಮಿಶ್ರಾ ತಿಳಿಸಿದ್ದಾರೆ. ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆಗಳನ್ನು ನಡೆಸಲು, ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯ ಎಂದಿದ್ದಾರೆ.

<><><>

ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು, ಸಚಿವಾಲಯ ಸಿಬ್ಬಂದಿಗೆ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, “ಜಾಗೃತಿ ಅರಿವು ಸಪ್ತಾಹ-2024” ಆಚರಣೆಯ, ಪ್ರತಿಜ್ಞಾ ವಿಧಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬೋಧಿಸಿದರು.

<><><>

ಭ್ರಷ್ಟಾಚಾರ ಸಮಾಜಕ್ಕೆ ಅಂಟಿದ ಪಿಡುಗು. ನಿಸ್ವಾರ್ಥ ಸೇವೆ, ನಿಸ್ವಾರ್ಥ ಜೀವನ ಧ್ಯೇಯವಾಗಬೇಕು ಎಂದು, ಧಾರವಾಡ ಜಿಲ್ಲಾ ಪ್ರಧಾನ ನ್ಯಾಯಾಧೀಶರಾದ ಬಿ.ಜಿ.ರಮಾ ಹೇಳಿದ್ದಾರೆ. ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, ಕರ್ನಾಟಕ ಲೋಕಾಯುಕ್ತದ ಸಹಯೋಗದಲ್ಲಿ, ‘ರಾಷ್ಟ್ರದ ಸಮೃದ್ಧಿಗಾಗಿ ಸತ್ಯನಿಷ್ಠ ಸಂಸ್ಕೃತಿ’ ಎಂಬ ಧ್ಯೇಯದೊಂದಿಗೆ, ‘ಜಾಗೃತಿ ಅರಿವು ಸಪ್ತಾಹ’ವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರದ ಆಯುಷ್ ಮಂತ್ರಾಲಯ, ಸ್ವದೇಶಿ ವೈದ್ಯಕೀಯ ಪದ್ಧತಿ ಆಯುರ್ವೇದದ, 9ನೇ ದಿನಾಚರಣೆಯನ್ನು ಇಂದು ದೇಶಾದ್ಯಂತ, ಆಯೋಜಿಸಿದೆ. 150 ದೇಶಗಳು, 'ಜಾಗತಿಕ ಆರೋಗ್ಯಕ್ಕಾಗಿ, ಆಯುರ್ವೇದದ ಅನ್ವೇಷಣೆಗಳು' ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯುರ್ವೇದ ದಿನಾಚರಣೆ ಮಾಡಲಿವೆ. ಆಯುರ್ವೇದ ಜಾಗತಿಕ ಆಂದೋಲನವಾಗಿ 30 ದಿನಗಳ ವರೆಗೆ, ಆಚರಿಸಲ್ಪಡಲಿದೆ. ಆಯುರ್ವೇದ ವೈದ್ಯಕೀಯದ ವಿಶೇಷತೆ, ಚಿಕಿತ್ಸಾ ವಿಧಾನ ಮತ್ತು ರೋಗ ಬಾರದಂತೆ ತಡೆಯುವ ಉಪಕ್ರಮಗಳ ಕುರಿತು, ಹಲವು ವಿಧದ ಸಂಶೋಧನೆಗಳ ಚಿಂತನ–ಮಂಥನ ದೇಶಾದ್ಯಂತ ಇಂದು ನಡೆಯಲಿದೆ.

<><><>

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬೆಳಗಾವಿ ಜಿಲ್ಲೆ, ಬೈಲಹೊಂಗಲದ ಆಯುರ್ವೇದ ವೈದ್ಯ ಡಾಕ್ಟರ್ ಶಿವಕುಮಾರ ಹಿರೇಮಠ.

<><><>

ಡಾಕ್ಟರ್ ಶಿವಕುಮಾರ ಹಿರೇಮಠ ಧ್ವನಿ 43 ಸೆಕೆಂದುಗಳು

<><><>

ಧನ್ವಂತರಿ ಜಯಂತಿ ಮತ್ತು ಆಯುರ್ವೇದ ದಿನದ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಮಧ್ಯಾಹ್ನ 12:30ಕ್ಕೆ ದಿಲ್ಲಿಯ ಅಖಿಲ ಭಾರತ ಆಯುರ್ವೇದ ಸಂಸ್ಥೆಯಲ್ಲಿ, 12 ಸಾವಿರದ 8 ನೂರಾ 50 ಕೋಟಿ ರೂಪಾಯಿಗಳ, ಆರೋಗ್ಯ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

<><><>

ಪ್ರಧಾನಮಂತ್ರಿಯವರು ಬೊಮ್ಮಸಂದ್ರ ಮತ್ತು ನರಸಾಪುರದ ಇ.ಎಸ್.ಐ. ಆಸ್ಪತ್ರೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

<><><>

ಸ್ತನ ಕ್ಯಾನ್ಸರ್ ಜಾಗ್ರತಿ ಮಾಸಿಕವನ್ನು, ಆಚರಿಸಲಾಗುತ್ತಿದೆ. ಮಹಿಳೆಯರಲ್ಲಿ ಕಂಡು ಬರುವ ಕ್ಯಾನ್ಸರ್‌ಗಳಲ್ಲಿ, ಸ್ತನ ಕ್ಯಾನ್ಸರ್ ಮೊದಲ ಸ್ಥಾನದಲ್ಲಿದೆ. ಇತ್ತೀಚೆಗೆ ಸ್ತನ ಕ್ಯಾನ್ಸರ್ ಪ್ರಕರಣಗಳು ಏರು ಗತಿಯಲ್ಲಿವೆ. ಮಹಿಳೆಯರು ಕಾಳಜಿ ಮತ್ತು ಹೆಚ್ಚು ಮುಂಜಾಗ್ರತೆ ವಹಿಸಬೇಕು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ಮನವಿ ಮಾಡಿದ್ದಾರೆ.

<><><>

ಸ್ತನ ಕ್ಯಾನ್ಸರ್‌ಗೆ ಕಾರಣವಾಗುವ ಗಡ್ಡೆಗಳ ಕುರಿತು, ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯ ಮೆಡಿಕಲ್ ಆಂಕಾಲಜಿ ಪ್ರಾಧ್ಯಾಪಕ, ಡಾಕ್ಟರ್ ಸುರೇಶ ಬಾಬು, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಸುರೇಶ ಬಾಬು ಧ್ವನಿ 43 ಸೆಕೆಂದುಗಳು

<><><>

ನಾಡಿದ್ದು 31ನೇ ತಾರೀಖು, ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ 150ನೇ ಜನ್ಮ ಜಯಂತಿ. ಆ ದಿನವನ್ನು, ರಾಷ್ಟ್ರೀಯ ಏಕತಾ ದಿನವಾಗಿ ಆಚರಿಸಲಾಗುತ್ತದೆ. ತನ್ನಿಮಿತ್ತ, 'ಏಕತೆಗಾಗಿ ಓಟ' ವನ್ನು, ದೇಶಾದ್ಯಂತ ಆಯೋಜಿಸಲಾಗುತ್ತದೆ. ಆದರೆ, ಈ ಬಾರಿ ಅಂದು, ದೀಪಾವಳಿ ಹಬ್ಬದ ಪ್ರಯುಕ್ತ, ಇಂದು ಏಕತೆಗಾಗಿ ಓಟವನ್ನು ಹಲವೆಡೆ ಆಯೋಜಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ, 'ದೇಶದ ಏಕತೆಯ ಮಂತ್ರದೊಂದಿಗೆ, ಫಿಟ್ನೆಸ್ ಮಂತ್ರವನ್ನು ಕೂಡ ಎಲ್ಲೆಡೆ ಪಸರಿಸಿ' ಎಂದು ಕರೆ ನೀಡಿದ್ದಾರೆ.

<><><>

ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಖಲಾದ, ಲೈಂಗಿಕ ದೌರ್ಜನ್ಯ ಪ್ರಕರಣಗಳ ವರದಿಯನ್ನು, ಮೂರು ತಿಂಗಳೊಳಗಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕಿದೆ. ರಾಜ್ಯದ ಎಲ್ಲ 31 ಜಿಲ್ಲಾಧಿಕಾರಿಗಳಿಂದ ವರದಿ ಕೇಳಲಾಗಿದೆ ಎಂದು, ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ, ಲತಾ ಅವರು ತಿಳಿಸಿದ್ದಾರೆ. ಮಂಡ್ಯದಲ್ಲಿ ಆಯೋಜಿಸಿದ್ದ, ಆಂತರಿಕ ದೂರು ನಿರ್ವಹಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ ಮಾತನಾಡಿ, ಲೈಂಗಿಕ ದೌರ್ಜನ್ಯದ ದೂರು ನೀಡುವವರ ಸಂಖ್ಯೆ ಕಡಿಮೆ. ಈ ಸಂಬಂಧ ರಚಿಸಲಾಗಿರುವ ಆಂತರಿಕ ಸಮಿತಿಗಳು ಕಾಲಕಾಲಕ್ಕೆ ಪರಿಶೀಲಿಸಬೇಕು. ಅಪರಾಧಿಗಳು ತಪ್ಪಿಸಿಕೊಂಡು, ಅಮಾಯಕರು ನೋವು ಅನುಭವಿಸುವಂತಾಗಬಾರದು, ಎಂದರು.

<><><>

ಜಾರ್ಜಿಯಾ ದೇಶದ ಬಾಟೂಮಿಯಲ್ಲಿ ನಡೆದ, ಅಂತಾರಾಷ್ಟ್ರೀಯ ವುಶು ಚಾಂಪಿಯನ್‌ಶಿಪ್‌ನಲ್ಲಿ, ಬಾಗಲಕೋಟೆಯ ಅನಿತಾ ಚೌವ್ಹಾಣ್, ಬಂಗಾರ ಮತ್ತು ಬೆಳ್ಳಿ ಪದಕ ಗೆದ್ದು, ಗಮನ ಸೆಳೆದಿದ್ದಾರೆ. 15 ದೇಶಗಳಿಂದ, ಸಾವಿರದ ಐನೂರಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗಿಯಾಗಿದ್ದ, ವುಶು ಚಾಂಪಿಯನ್‌ಶಿಪ್‌ನಲ್ಲಿ, ಅನಿತಾ, 'ತಾವಲು ವಿಭಾಗದ ಕ್ವಾನ್ ಡೌ'ದಲ್ಲಿ ಬಂಗಾರ ಪದಕ ಹಾಗೂ 'ನಾನ್ ಕ್ವಾನ್' ನಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ. ಕರ್ನಾಟಕ ವುಶು ಸಂಸ್ಥೆ ಅಧ್ಯಕ್ಷ ವೀರಣ್ಣ ಚರಂತಿಮಠ, ಅನಿತಾ ಅವರನ್ನು ಸನ್ಮಾನಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹಾಸನಾಂಬಾ ದೇವಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

<><><>

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಅವರು, ಜಲಶಕ್ತಿ ಆಯೋಗದ ಸಲಹಾ ಸಮಿತಿ ಸದಸ್ಯರಾಗಿ ನೇಮಕಗೊಂಡಿದ್ದಾರೆ.

<><><>

ಸೋದರಿ ನಿವೇದಿತಾ ಅವರ ಜನ್ಮ ದಿನದ ಅಂಗವಾಗಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

<><><>

'ಹಣತೆ ಬೆಳಗಿಸಿ; ದೀಪಾವಳಿ ಆಚರಿಸಿ, ಪಟಾಕಿ ತ್ಯಜಿಸಿ, ಮಾಲಿನ್ಯ ತಡೆಯಿರಿ' ಘೋಷಣೆಯಡಿ, ಹಸಿರು ದೀಪಾವಳಿ ಆಚರಣೆಗೆ ಪ್ರತಿಜ್ಞಾ ವಿಧಿಯನ್ನು, ಮಡಿಕೇರಿ ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಬೋಧಿಸಿದರು.

<><><>

ಮಾಹಿತಿ ಹಕ್ಕು ದಿನಾಚರಣೆ ಅಂಗವಾಗಿ, ಇಂದು ಬೆಳಗ್ಗೆ 10.30ಕ್ಕೆ, ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ವಿಭಾಗ ಮಟ್ಟದ ಮಾಹಿತಿ ಹಕ್ಕು ಕಾರ್ಯಾಗಾರ ಜರುಗಲಿದೆ.

<><><>

ತುಮಕೂರು ಜಿಲ್ಲೆಯಲ್ಲಿ ಇಂದು, ಮಳೆಯಿಂದ ಬೆಳೆ ಹಾನಿಯಾದ ಕ್ಷೇತ್ರಗಳಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು, ಭೇಟಿ ನೀಡಿ, ಸಮೀಕ್ಷಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪರಿಶಿಷ್ಟ ಸಮುದಾಯಗಳ ಒಳ ಮೀಸಲಾತಿ ಜಾರಿಗೆ, ಏಕ ಸದಸ್ಯ ಆಯೋಗ ರಚಿಸಲು, ಸಚಿವ ಸಂಪುಟ ಸಭೆ, ನಿರ್ಧಾರ.
- 69ನೇ ಕನ್ನಡ ರಾಜ್ಯೋತ್ಸವ; ನವೆಂಬರ್ 1 ರಂದು, ಅರ್ಥಪೂರ್ಣವಾಗಿ ಆಚರಿಸಲು, ಮುಖ್ಯಮಂತ್ರಿ ಕರೆ.
- 'ಜಾಗತಿಕ ಆರೋಗ್ಯಕ್ಕಾಗಿ, ಆಯುರ್ವೇದದ ಅನ್ವೇಷಣೆಗಳು' ಧ್ಯೇಯದೊಂದಿಗೆ, ಇಂದು 9ನೇ ಆಯುರ್ವೇದ ಮಾಸಿಕಕ್ಕೆ, ಚಾಲನೆ.
- ಸ್ತನ ಕ್ಯಾನ್ಸರ್ ಜಾಗ್ರತಿ ಮಾಸಿಕ; ಮಹಿಳೆಯರು ಮುಂಜಾಗ್ರತೆ ವಹಿಸಿ – ದಿನೇಶ ಗುಂಡೂರಾವ, ಮನವಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>